# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ. ಬಿ.ಜಿ.ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 438 (400) |
| ಉತ್ತರಿಸಬೇಕಾದ ದಿನಾಂಕ | : | 19.08.2026 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರ್ಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿರುವ ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳಿಗೆ ಕುಡಿಯುವ ನೀರಿಗೆ ಆಧಾರವಾಗಿರುವ ಬೋರ್ ವೆಲ್ ಗಳ ಸಂಖ್ಯೆ ಎಷ್ಟು: | ಕಲಬುರ್ಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿರುವ ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳಿಗೆ ಕುಡಿಯುವ ನೀರಿಗೆ ಆಧಾರವಾಗಿರುವ ಒಟ್ಟು ಕೊಳವೆಬಾವಿಗಳು ಕ್ರಮವಾಗಿ 5321 ಮತ್ತು 3843 ಸಂಖ್ಯೆಗಳು ಇರುತ್ತವೆ. |
| ಆ) | ಕುಡಿಯುವ ನೀರು ಪೂರೈಸುವ ಬೋರ್ ವೆಲ್‌ಗಳು ದುರಸ್ತಿಯಾದಾಗ ಕೂಡಲೇ ದುರಸ್ತಿ ಕಾರ್ಯ ಕೈಗೊಳ್ಳದೆ ಇರುವುದರಿಂದ ಸದರಿ ಗ್ರಾಮಗಳಿಗೆ ಕುಡಿಯುವ ನೀರಿಗೆ ಸಮಸ್ಯೆಯಾಗುತ್ತಿರುವುದನ್ನು ಸರ್ಕಾರ ಗಮನಿಸಿದೆಯೇ: ಗಮನಿಸಿದ್ದಲ್ಲಿ, ಕೈಗೊಂಡ ಪರ್ಯಾಯ ವ್ಯವಸ್ಥೆಯೇನು: | ಗಮನಕ್ಕೆ ಬಂದಿರುತ್ತದೆ.<br><br>ಕಲಬುರ್ಗಿ ಮತ್ತು ಯಾದಗಿರಿ ಜಿಲ್ಲೆಯ ಗ್ರಾಮೀಣ ಜನವಸತಿ ಪ್ರದೇಶಗಳಲ್ಲಿ ಕೊಳವೆಬಾವಿಗಳ ದುರಸ್ತಿ ಕಾರ್ಯಗಳನ್ನು ಗ್ರಾಮ ಪಂಚಾಯತಿ ವತಿಯಿಂದ ಹಾಗೂ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖಾ ವತಿಯಿಂದ ಕೈಗೊಳ್ಳಲಾಗುತ್ತಿದೆ.<br><br>ಪ್ರಸಕ್ತ ಸಾಲಿನಲ್ಲಿ ದುರಸ್ತಿಗೊಂಡಿರುವ ಕೊಳವೆಬಾವಿಗಳ ರಿಪೇರಿ ಕಾರ್ಯಗಳನ್ನು ಕೈಗೊಳ್ಳಲು, ಫ್ಲಶಿಂಗ್, ರೀಡ್ರಿಲ್ಲಿಂಗ್, ಖಾಸಗಿ ಕೊಳವೆಬಾವಿ ಗಳನ್ನು ಬಾಡಿಗೆ ಆಧಾರದ ಮೇಲೆ ಪಡೆಯಲು ಮತ್ತು ಅನಿವಾರ್ಯ ಸಂದರ್ಭಗಳಲ್ಲಿ ಕೊಳವೆಬಾವಿಗಳನ್ನು ಕೊರೆದು, ಪರ್ಯಾಯವಾಗಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಕೈಗೊಳ್ಳಲು ಕ್ರಮವಾಗಿ ಕಲಬುರ್ಗಿ ಜಿಲ್ಲೆಗೆ ರೂ. 5.00 ಕೋಟಿಗಳನ್ನು ಮತ್ತು ಯಾದಗಿರಿ ಜಿಲ್ಲೆಗಳಿಗೆ ರೂ. 4.00 ಕೋಟಿಗಳನ್ನು ಟಾಸ್ಕ್‌ಫೋರ್ಸ್ ಅಡಿಯಲ್ಲಿ ಬಿಡುಗಡೆಗೊಳಿಸಲಾಗಿದೆ.<br><br>ಇದಲ್ಲದೆ ಕೊಳವೆಬಾವಿಗಳನ್ನು ಕೊರೆಯುವುದು ಸೇರಿದಂತೆ ಕುಡಿಯುವ ನೀರಿನ ಸಮಸ್ಯೆಗಳನ್ನು ಪರಿಹರಿಸಲು ಕಲಬುರ್ಗಿ ಮತ್ತು ಯಾದಗಿರಿ ಜಿಲ್ಲೆಗಳ ಪ್ರತಿ ಗ್ರಾಮೀಣ ವಿಧಾನಸಭಾ ಕ್ಷೇತ್ರಕ್ಕೆ ತಲಾ ರೂ. 1.00 ಕೋಟಿಯಂತೆ ಅನುದಾನವನ್ನು ಸಹಾ ಹಂಚಿಕೆ ಮಾಡಲಾಗಿರುತ್ತದೆ.<br><br>ಒಟ್ಟಾರೆಯಾಗಿ ಪ್ರಸಕ್ತ ಸಾಲಿನಲ್ಲಿ ಕುಡಿಯುವ ನೀರಿನ ಸಮಸ್ಯೆಗಳನ್ನು ಪರಿಹರಿಸಲು ಕಲಬುರ್ಗಿ ಜಿಲ್ಲೆಗೆ ರೂ.13.00 ಕೋಟಿಗಳನ್ನು ಮತ್ತು ಯಾದಗಿರಿ ಜಿಲ್ಲೆಗೆ ರೂ.8.00 ಕೋಟಿಗಳನ್ನು ಹಂಚಿಕೆ ಮಾಡಲಾಗಿರುತ್ತದೆ. |

| | | |
|---|---|---|
| ಇ) | ಈ ಮೇಲ್ಕಂಡ ಜಿಲ್ಲೆಗಳಿಗೆ ಜೆಜೆಎಂ ಯೋಜನೆಯಡಿ ಬಿಡುಗಡೆಯಾದ ಅನುದಾನ ಎಷ್ಟು: ಯಾವ ಯಾವ ಗ್ರಾಮ ಪಂಚಾಯತಿಗಳಲ್ಲಿ ಹಾಗೂ ಎಷ್ಟು ಗ್ರಾಮಗಳಲ್ಲಿ ಮನೆ-ಮನೆಗೆ ನಳ ಅಳವಡಿಸಿ ನೀರು ಸರಬರಾಜು ಮಾಡಲಾಗುತ್ತಿದೆ: | ಯಾದಗಿರಿ ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಜೆಜೆಎಂ ಯೋಜನೆಯಡಿ ಮನೆ-ಮನೆಗೆ ಕಾರ್ಯಾತ್ಮಕ ನಳ ನೀರು ಸಂಪರ್ಕ(FHTC) ಒದಗಿಸಲು ರೂ. 576.22 ಕೋಟಿಗಳ ಅಂದಾಜು ಮೊತ್ತಕ್ಕೆ 692 ಕಾಮಗಾರಿಗಳು ಮಂಜೂರಾಗಿದ್ದು, ಇದುವರೆಗೆ ಕಾಮಗಾರಿಗಳ ಭೌತಿಕ ಪ್ರಗತಿ ಅನುಸಾರ ರೂ. 419.73 ಕೋಟಿಗಳ ಅನುದಾನ ಬಿಡುಗಡೆಯಾಗಿರುತ್ತದೆ.<br><br>ಕಲಬುರಗಿ ಜಿಲ್ಲೆಗೆ 1235 ಕಾಮಗಾರಿಗಳಿಗೆ ರೂ.1881.66 ಕೋಟಿಗಳು ಅನುಮೋದನೆಯಾಗಿದ್ದು, ಕಾಮಗಾರಿಗಳ ಭೌತಿಕ ಪ್ರಗತಿ ಅನುಸಾರ ರೂ.779.33 ಕೋಟಿಗಳು ಬಿಡುಗಡೆಯಾಗಿರುತ್ತದೆ.<br><br>ಕಲಬುರಗಿ ಜಿಲ್ಲೆಯಲ್ಲಿ ಒಟ್ಟು 260 ಗ್ರಾಮ ಪಂಚಾಯತಿಗಳ 1235 ಜನವಸತಿಗಳಿದ್ದು, ಇದುವರೆಗೆ 523 ಜನವಸತಿಗಳ ಮನೆಗಳಿಗೆ ನಳ ಸಂಪರ್ಕ ಅಳವಡಿಸಿ ನೀರು ಸರಬರಾಜು ಮಾಡಲಾಗುತ್ತಿದೆ. ಇನ್ನುಳಿದ ಜನವಸತಿಗಳ ಕಾಮಗಾರಿಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿರುತ್ತವೆ.<br><br>ಯಾದಗಿರಿ ಜಿಲ್ಲೆಯಲ್ಲಿ ಒಟ್ಟು 122 ಗ್ರಾಮ ಪಂಚಾಯತಿಗಳ 708 ಜನವಸತಿಗಳಿದ್ದು, ಇದುವರೆಗೆ 413 ಜನವಸತಿಗಳ ಮನೆಗಳಿಗೆ ನಳ ಸಂಪರ್ಕ ಅಳವಡಿಸಿ ನೀರು ಸರಬರಾಜು ಮಾಡಲಾಗುತ್ತಿದೆ. ಇನ್ನುಳಿದ ಜನವಸತಿಗಳ ಕಾಮಗಾರಿಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿರುತ್ತವೆ. |
| ಈ) | ಸದರಿ ಯೋಜನೆಯಡಿ ಕೆಲವು ಗ್ರಾಮಗಳಲ್ಲಿ ನಳ ಅಳವಡಿಸಲಾಗಿದ್ದು, ನೀರು ಸರಬರಾಜು ಮಾಡದಿರುವುದನ್ನು ಸರ್ಕಾರ ಗಮನಿಸಿದೆಯೇ: ಈ ಯೋಜನೆಗೆ ಇದುವರೆಗೂ ಖರ್ಚು ಮಾಡಿರುವ ಅನುದಾನ ಎಷ್ಟು? | ಕಲಬುರಗಿ ಹಾಗೂ ಯಾದಗಿರಿ ಜಿಲ್ಲೆಯಲ್ಲಿ ಜಲ ಜೀವನ ಮಿಷನ್ ಯೋಜನೆಯಡಿ ಕೆಲವು ಗ್ರಾಮಗಳಲ್ಲಿ ನಳ ಅಳವಡಿಸಲಾಗಿದ್ದು, ಕಾಮಗಾರಿಯು ವಿವಿಧ ಹಂತದಲ್ಲಿ ಪ್ರಗತಿಯಲ್ಲಿರುವುದರಿಂದ ಹಾಗೂ ಕೆಲವು ಕಡೆ ಜಲಮೂಲಗಳ ಇಳುವರಿ ಕಡಿಮೆಯಿರುವ ಕಾರಣ ನೀರು ಸರಬರಾಜು ಮಾಡಲಾಗಿರುವುದಿಲ್ಲ. ಕಾಮಗಾರಿಯು ಪೂಣಗೊಂಡ ನಂತರ ನೀರು ಸರಬರಾಜು ಮಾಡಲು ಕ್ರಮವಹಿಸಲಾಗುತ್ತದೆ. |

| | | |
|---|---|---|
| | | ಕುಡಿಯುವ ನೀರಿನ ಅಭಾವವನ್ನು ಕೂಲಂಕುಷವಾಗಿ ಗಮನಿಸಿ ಕೊಳವೆ ಬಾವಿಗಳು ಬತ್ತಿ ಹೋದಲ್ಲಿ ಪ್ರಥಮ ಆದ್ಯತೆ ಮೇರೆಗೆ ಜಿಲ್ಲಾ ಪಂಚಾಯಿತಿ/ತಾಲ್ಲೂಕು ಪಂಚಾಯಿತಿ/ಗ್ರಾಮ ಪಂಚಾಯಿತಿಗಳ ಅನುದಾನ ಬಳಸಿ ಬಾಡಿಗೆ ಆಧಾರದ ಮೇಲೆ ಕೊಳವೆ ಬಾವಿಗಳನ್ನು ಪಡೆಯಲು ಅಥವಾ ಕೊಳವೆ ಬಾವಿಗಳನ್ನು ಫ್ಲಷಿಂಗ್ (Flushing) ಮಾಡಿ ಹಾಗೂ ಆಳಗೊಳಿಸುವುದರೊಂದಿಗೆ (Deepening) ಇನ್ನುಳಿದ ಅವಶ್ಯಕ ಅಂಶಗಳಾದ ಪೈಪ್ ಲೈನ್ ಅಳವಡಿಸುವುದು, ಪಂಪಿಂಗ್ ಮಷನರಿ ಹಾಗೂ ಅವಶ್ಯ ವಿದ್ಯುತ್ ಸಂಪರ್ಕಕ್ಕೆ ಅವಶ್ಯವಾಗುವಂತೆ ಕ್ರಮವಹಿಸಲಾಗುತ್ತದೆ.<br><br>ಮುಂದುವರೆದು, ಸದರಿ ಜಿಲ್ಲೆಯಲ್ಲಿನ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯ ಕಾಮಗಾರಿ ಪ್ರಗತಿಯಲ್ಲಿರುವುದರಿಂದ ಕಾಮಗಾರಿ ಪೂರ್ಣಗೊಂಡ ನಂತರ ಎಲ್ಲಾ ಗ್ರಾಮೀಣ ಜನವಸತಿಗಳಿಗೆ ನೀರು ಸರಬರಾಜು ಮಾಡಲು ಕ್ರಮವಹಿಸಲಾಗುತ್ತದೆ.<br><br>ಯಾದಗಿರಿ ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಜೆಜೆಎಂ ಯೋಜನೆಯಡಿ ಮನೆ-ಮನೆಗೆ ಕಾರ್ಯಾತ್ಮಕ ನಳ ನೀರು ಸಂಪರ್ಕ(FHTC) ಒದಗಿಸಲು ಇದುವರೆಗೆ ರೂ. 419.73 ಕೋಟಿಗಳ ಅನುದಾನ ವೆಚ್ಚ ಮಾಡಲಾಗಿರುತ್ತದೆ.<br><br>ಕಲಬುರಗಿ ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಜೆಜೆಎಂ ಯೋಜನೆಯಡಿ ಇದುವರೆಗೆ ರೂ.779.33 ಕೋಟಿಗಳ ಅನುದಾನ ವೆಚ್ಚ ಮಾಡಲಾಗಿರುತ್ತದೆ. |

**(ಈಶ್ವರ ಬಿ. ಖಂಡ್ರೆ)**

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್

ಸಚಿವರು